Date : 09-10-2015

# ತೈಲಹಿಂಡಿ ರಫ್ತು ಹೆಚ್ಚಳ

ಸೆಪ್ಟೆಂಬರ್ ತಿಂಗಳಲ್ಲಿ ರಫ್ತಾಗಿರುವ ತೈಲಹಿಂಡಿ ಪ್ರಮಾಣದಲ್ಲಿ ಶೇ4ರಷ್ಟು ಹೆಚ್ಚಳ ಉಂಟಾಗಿರುವುದು ಕಂಡು ಬಂದಿದೆ. ಸೆಪ್ಟೆಂಬರ್‌ನಲ್ಲಿ ಒಟ್ಟು 113913 ಟನ್‌ಗಳಷ್ಟು ಹಿಂಡಿ ರಫ್ತಾಗಿದ್ದು, ಸೋಯಾಹಿಂಡಿ ರಫ್ತು ಏರಿಕೆಯಾಗಿದ್ದರೆ ಸಾಸಿವೆ ಹಿಂಡಿ ರಫ್ತು ಇಳಿಮುಖವಾಗಿರುವುದಾಗಿ ವರದಿಯಾಗಿದೆ.

ಎಪ್ರಿಲ್‌ನಿಂದ ಮುಂದಿನ ಆರು ತಿಂಗಳುಗಳ ಅವಧಿಯಲ್ಲಿ 723661 ಟನ್ ಹಿಂಡಿ ರಫ್ತು ಮಾಡಲಾಗಿದ್ದು, ಹಿಂದಿನ ವರ್ಷ ಇದೇ ಅವಧಿಗಿಂತ ಶೇ29ರಷ್ಟು ಕಡಿಮೆಯಾಗಿದೆ.